## ೨

# ಪರಿಶುದ್ಧಾತ್ಮನ ಬಗ್ಗೆ ಯೇಸುವಿನ ಬೋಧನೆ

*"ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪರಿಶುದ್ಧಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು" (ಯೋಹಾನ 14:26).*

ಪರಿಶುದ್ಧಾತ್ಮನನ್ನು ಕುರಿತಾಗಿರುವ ಯೇಸುವಿನ ಹೆಚ್ಚಾದ ಬೋಧನೆಯನ್ನು ಯೋಹಾನ ಸುವಾರ್ತೆಯು ಒಳಗೊಂಡಿರುತ್ತದೆ. ಅಪೊಸ್ತಲರು ಏನು ಹೇಳಬೇಕಾಗಿತ್ತು ಎಂಬುದನ್ನು ಪರಿಶುದ್ಧಾತ್ಮನು ಅವರಿಗೆ ಹೇಳುವನು ಎಂಬ ಯೇಸುವಿನ ವಾಗ್ದಾನವನ್ನು ಮೊದಲಿನ ಮೂರು ಸುವಾರ್ತೆಗಳು ಕೂಡಿಸಿ ಕೊಂಡಿರುತ್ತವೆ (ಮತ್ತಾಯ 10:19, 20; ಮಾರ್ಕ 13:11; ಲೂಕ 12:12). ಪರಿಶುದ್ಧಾತ್ಮನಿಗೆ ವಿರೋಧವಾದ ದೇವದೂಷಣೆಯ ಬಗೆಗೂ ಆತನ ಎಚ್ಚರಿಕೆಯನ್ನು ಅವು ಒಳಗೊಂಡಿವೆ (ಮತ್ತಾಯ 12:31, 32; ಮಾರ್ಕ 3:29; ಲೂಕ 12:10). ಒಂದು ಸುವಾರ್ತೆಯಲ್ಲಿ ಮತ್ತಾಯನು ದೇವರ ಆತ್ಮನು ಬಲದಿಂದ ದೆವ್ವಗಳನ್ನು ಬಿಡಿಸುವದರ ಬಗ್ಗೆ (12:28) ಮತ್ತು ತಂದೆಯ, ಕುಮಾರನ ಮತ್ತು ಪರಿಶುದ್ಧಾತ್ಮನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸುವ ಆದೇಶವನ್ನು ಕುರಿತ ಯೇಸುವಿನ ಮಾತುಗಳನ್ನು ದಾಖಲೆ ಮಾಡಿದ್ದಾನೆ. ಎರಡು ಸುವಾರ್ತೆಗಳು ದಾವೀದನು ಪರಿಶುದ್ಧಾತ್ಮನ ಸಹಾಯದಿಂದ ಮಾತಾಡಿದನೆಂಬುದನ್ನು ಪ್ರಕಟಿಸುತ್ತವೆ (ಮತ್ತಾಯ 22:43; ಮಾರ್ಕ 12:36).

### ಲೂಕನ ಸುವಾರ್ತೆಯಲ್ಲಿ ಯೇಸುವಿನ ಹೇಳಿಕೆ

ಪರಿಶುದ್ಧಾತ್ಮನನ್ನು ಕೊಡುವದನ್ನು ಕುರಿತು ಯೇಸುವಿನಿಂದ ಕೊಡಲ್ಪಟ್ಟ ಒಂದು ಹೇಳಿಕೆಯನ್ನು ಲೂಕನು ದಾಖಲೆ ಮಾಡಿದ್ದಾನೆ: "ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪರಿಶುದ್ಧಾತ್ಮ ವರವನ್ನು ಕೊಡುವನಲ್ಲವೇ" (ಲೂಕ 11:13). ತನ್ನಷ್ಟಕ್ಕೆ ಈ ವಚನವು ಒಬ್ಬ ವ್ಯಕ್ತಿಯು ಸುಮ್ಮನೇ ಪ್ರಾರ್ಥಿಸುವದರಿಂದ ಪರಿಶುದ್ಧಾತ್ಮನನ್ನು ಹೊಂದಿಕೊಳ್ಳಬಹುದೆಂದು ಸೂಚಿಸುತ್ತಿರುವಂತೆ ತೋರುತ್ತದೆ. ಇತರ ವಾಕ್ಯಗಳ ಪರೀಕ್ಷೆಯು, ಪರಿಶುದ್ಧಾತ್ಮನನ್ನು ಸ್ವೀಕರಿಸುವದಕ್ಕಾಗಿ ಪ್ರಾರ್ಥನೆಗಿಂತ ಹೆಚ್ಚಾದದ್ದರ ಅವಶ್ಯಕತೆ ಇದೆ ಎಂಬುದನ್ನು ತೋರಿಸುತ್ತದೆ.

ಅದೇ ರೀತಿಯ ಹೇಳಿಕೆಯು ಮತ್ತಾಯನಲ್ಲಿ ಹೇಳಲ್ಪಟ್ಟಿದೆ: "ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ

ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವನಲ್ಲವೇ" (7:11). ದೇವರಿಂದ ವರಗಳನ್ನು ಸ್ವೀಕರಿಸುವದಕ್ಕೆ ಕೇಳುವದಕ್ಕಿಂದ ಹೆಚ್ಚಿನದು ಅವಶ್ಯವಾಗಿವೆಯೆಂದು ಪರಿಶುದ್ಧ ಬರಹದ ಬೇರೆ ಇತರ ವಾಕ್ಯಗಳು ಬೋಧಿಸುವವೋ? ಉತ್ತರವು ಪ್ರತಿಧ್ವನಿಸುವ "ಹೌದು" ಎಂದಿರುತ್ತದೆ.

"ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ದಯಪಾಲಿಸು" (ಮತ್ತಾಯ 6:11) ಎಂದು ದೇವರನ್ನು ಬೇಡಿಕೊಳ್ಳಲು ಯೇಸುವು ತನ್ನ ಶಿಷ್ಯರಿಗೆ ಬೋಧಿಸಿದನು. ಅನುದಿನದ ಆಹಾರವನ್ನು ಪಡೆಯಲು ಒಬ್ಬನು ಕೇವಲ ಬೇಡಿಕೊಳ್ಳಬೇಕು ಮತ್ತು ಅದು ಅವನಿಗೆ ಕೊಡಲ್ಪಡುವುದು ಎಂದು ಯಾರು ವಾದಿಸುವರು? ನಮ್ಮ ಅಗತ್ಯತೆಗಳಿಗಾಗಿ ನಾವು ಕೆಲಸ ಮಾಡಬೇಕು. ಪೌಲನು ಹೀಗೆ ಬರೆದನು:

> ಕಳವು ಮಾಡುವವನು ಇನ್ನು ಮೇಲೆ ಕಳವುಮಾಡದೆ ಕೈಯಿಂದ ಯಾವದೊಂದು ಒಳ್ಳೇ ಉದ್ಯೋಗವನ್ನು ಮಾಡಿ ದುಡಿಯಲಿ; ಆಗ ಕಷ್ಟದಲ್ಲಿರುವವರಿಗೆ ಕೊಡುವದಕ್ಕೆ ಅವನಿಂದಾಗುವುದು (ಎಫೆಸ 4:28).

> ನಾವು ಹಣಕೊಡದೆ ಯಾರ ಬಳಿಯಲ್ಲಿಯೂ ಊಟ ಮಾಡಲಿಲ್ಲ. ನಿಮ್ಮಲ್ಲಿ ಒಬ್ಬರಿಗೂ ಭಾರವಾಗ ಬಾರದೆಂದು ಹಗಲಿರುಳು ಕಷ್ಟದಿಂದಲೂ ಪ್ರಯಾಸದಿಂದಲೂ ದುಡಿದು ಜೀವನ ಮಾಡಿಕೊಂಡೆವು. ನಿಮ್ಮಿಂದ ಪೋಷಣೆ ಹೊಂದುವದಕ್ಕೆ ನಮಗೆ ಹಕ್ಕಿಲ್ಲವೆಂದು ಹಾಗೆ ಮಾಡಲಿಲ್ಲ. ನೀವು ನಮ್ಮನ್ನು ಅನುಸರಿಸುವದಕ್ಕಾಗಿ ನಿಮಗೆ ಮಾದರಿಯಾಗಿರೋಣವೆಂದೇ ಮಾಡಿದೆವು. ಇದಲ್ಲದೆ ನಾವು ನಿಮ್ಮ ಸಂಗಡ ಇದ್ದಾಗ ಕೆಲಸ ಮಾಡಲೊಲ್ಲದವನು ಊಟಮಾಡಬಾರದೆಂದು ನಿಮಗೆ ಆಜ್ಞಾಪಿಸಿದ್ದೇವಷ್ಟೆ. ಆದರೆ ನಿಮ್ಮಲ್ಲಿ ಕೆಲವರು ಯಾವ ಕೆಲಸವನ್ನೂ ಮಾಡದೆ ಇತರರ ಕೆಲಸದಲ್ಲಿ ಮಾತ್ರ ತಲೆಹಾಕಿ ಅಕ್ರಮವಾಗಿ ನಡೆಯುತ್ತಾರೆಂದು ವರ್ತಮಾನ ಕೇಳಿದ್ದೇವೆ. ಇಂಥವರು ತಮ್ಮ ಕೆಲಸವನ್ನು ನೋಡುತ್ತಾ ತಾವೇ ಸಂಪಾದಿಸಿದ್ದನ್ನು ಊಟ ಮಾಡಬೇಕೆಂದು ಕರ್ತನಾದ ಯೇಸುಕ್ರಿಸ್ತನಲ್ಲಿ ನಾವು ಆಜ್ಞಾಪಿಸಿ ಪ್ರಬೋಧಿಸುತ್ತೇವೆ (2 ಥೆಸಲೊನೀಕ 3:8-12).

ತನ್ನ ಆಶೀರ್ವಾದಗಳಿಗಾಗಿ ಪ್ರಾರ್ಥಿಸುವವರ ಯೋಗ್ಯ ಕೃತ್ಯಗಳನ್ನು ದೇವರು ಬಯಸುತ್ತಾನೆ. ದೇವರಿಂದ ಒಂದು ವರವನ್ನು ಹೊಂದಿಕೊಳ್ಳುವದಕ್ಕಾಗಿ, ಒಬ್ಬನು ಯೇಸುವಿನ ಹೆಸರಿನಲ್ಲಿ (ಯೋಹಾನ 14:14) ವಿಶ್ವಾಸದಲ್ಲಿ (ಯಾಕೋಬ 1:6, 7) ಸರಿಯಾದ ಸಂಗತಿಗಳಿಗಾಗಿ (ಯಾಕೋಬ 4:3) ಕೇಳಿಕೊಳ್ಳಬೇಕು. ದೇವರ ಚಿತ್ತಕ್ಕನುಗುಣವಾಗಿರುವ ಬಿನ್ನಹಗಳನ್ನು ಮಾಡಬೇಕು (1 ಯೋಹಾನ 5:14) ಮತ್ತು ಆತನ ದೃಷ್ಟಿಯಲ್ಲಿ ಮೆಚ್ಚಿಕೆಯಾದದ್ದನ್ನು ಮಾಡುತ್ತ, ದೇವರ ಆಜ್ಞೆಗಳನ್ನು ಕೈಕೊಳ್ಳಬೇಕು (1 ಯೋಹಾನ 3:22).

ಹಾಗೇಯೇ, ಪರಿಶುದ್ಧಾತ್ಮನು ನಮಗೆ ಕೊಡಲ್ಪಡುವ ಮೊದಲು ದೇವರನ್ನು ಕೇಳಿಕೊಳ್ಳುವದಕ್ಕಿಂತ ಹೆಚ್ಚಾದದ್ದು ಅವಶ್ಯವಾಗಿರುವದು. ಕೇವಲ ಪ್ರಾರ್ಥನೆಯ ತಳಹದಿಯ ಮೇಲೆ ಪರಿಶುದ್ಧಾತ್ಮನು ಕೊಡಲ್ಪಟ್ಟ ಒಂದೇ ಉದಾಹರಣೆಯನ್ನು ಬೈಬಲ್ ಕೊಡುವದಿಲ್ಲ.

## ಯೋಹಾನನ ಸುವಾರ್ತೆಯಲ್ಲಿ ಯೇಸುವಿನ ಬೋಧನೆ

ಪರಿಶುದ್ಧಾತ್ಮನ ಬಗ್ಗೆ ಯೇಸುವು ಹೇಳಬೇಕಾದದ್ದರಲ್ಲಿ ಉಳಿದದ್ದು ಯೋಹಾನನ ಪುಸ್ತಕದಲ್ಲಿ ಕಂಡು ಬರುತ್ತದೆ. ನೂತನ ಜನನದಲ್ಲಿ ಪರಿಶುದ್ಧಾತ್ಮನ ಚಟುವಟಿಕೆ (ಯೋಹಾನ 3:3-5) ಮತ್ತು ಆಂತರ್ಯದಲ್ಲಿ ವಾಸಿಸುವ ಆತ್ಮನ (ಯೋಹಾನ 14:17) ಬಗ್ಗೆ ಇತರ ಪಾಠಗಳಲ್ಲಿ ಚರ್ಚಿಸಲ್ಪಡುವುದು.[1] ಈ ಪಾಠದ ವಿಚಾರವು ಯೋಹಾನ 14:16, 17, 26; 15:26; 16:13ರಲ್ಲಿಯ ಯೇಸುವಿನ ಹೇಳಿಕೆಗಳಾಗಿವೆ.

### ಹಿನ್ನೆಲೆ

ಪರಿಶುದ್ಧಾತ್ಮನನ್ನು ಕುರಿತಾಗಿ ಯೇಸುವಿನ ವಾಗ್ದಾನಗಳ ಹಿನ್ನೆಲೆಯು ಬಹಳ ಪ್ರಾಮುಖ್ಯವಾದದ್ದಾಗಿದೆ. ಆ ಸಮಯದಲ್ಲಿ ಯೇಸುವು ಎಲ್ಲಿದ್ದನು? ಆತನೊಂದಿಗೆ ಯಾರು ಇದ್ದರು? ಯಾರಿಗೆ ಆತನು ಮಾತಾಡುತ್ತಿದ್ದನು?

ವಿಚಾರದಲ್ಲಿರುವ ವ್ಯಾಖ್ಯಾನಗಳು ಯೇಸು ಮತ್ತು ಆತನ ಶಿಷ್ಯರು ಪಸ್ಕಾವನ್ನು ಮತ್ತು ಕೊನೆಯ ಭೋಜನವನ್ನು ಆಚರಿಸಿದ ನಂತರ ಮೇಲಂತಸ್ತನ್ನು ಬಿಡುವ ಮೊದಲು ಮಾಡಲ್ಪಟ್ಟವು. ಬಡವಿಧವೆಯು ಕೊಟ್ಟ ಕಾಣಿಕೆಯನ್ನು ಗಮನಿಸಿದ (ಮಾರ್ಕ 12:41-44; ಲೂಕ 21:1-4), ಯೆರೂಸಲೇಮಿನಲ್ಲಿಯ ದೇವಾಲಯವನ್ನು ಬಿಟ್ಟ ನಂತರ, ಯೇಸು ಮತ್ತು ಆತನ ಶಿಷ್ಯರು ಎಣ್ಣೆ ಮರಗಳ ಬೆಟ್ಟಕ್ಕೆ ನಡೆದು ಹೋಗಬೇಕಾಗಿತ್ತು (ಮತ್ತಾಯ 24:3; ಮಾರ್ಕ 13:1-3). ಪಸ್ಕ ಹಬ್ಬವು ಸಮೀಪಿಸುವದರೊಂದಿಗೆ, ಯೇಸುವು ತನ್ನ ಶಿಷ್ಯರಲ್ಲಿ ಇಬ್ಬರನ್ನು (ಮಾರ್ಕ 14:13) ಪಟ್ಟಣದೊಳಗೆ (ಹೆಸರು ಹೇಳಿ ರದಿದ್ದರೂ, ಅದು ಯೆರೂಸಲೇಮ ಆಗಿತ್ತು) ಪಸ್ಕ ಹಬ್ಬವನ್ನು ಆಚರಿಸಲು ಸಿದ್ಧತೆ ಮಾಡಲು ಕಳುಹಿಸಿದನು (ಮತ್ತಾಯ 26:18; ಮಾರ್ಕ 14:14; ಲೂಕ 22:10, 11). ಪಸ್ಕ ಭೋಜನೆ ಮಾಡುವಂತೆ - ಎಲ್ಲಾ ಸಲಕರಣೆಗಳಿರುವ ಮೇಲಿನ ಕೋಣೆಯನ್ನು - ಅತಿಥಿ ಕೋಣೆಯನ್ನು ಕುರಿತು ವಿಚಾರಿಸಲು ಅವರು ಹೇಳಲ್ಪಟ್ಟರು (ಮಾರ್ಕ 14:14, 15; ಲೂಕ 22:11, 12).

"ಸಂಜೆಯಾದಾಗ ಆತನು ಹನ್ನೆರಡು ಮಂದಿ ಶಿಷ್ಯರ ಕೂಡ ಬಂದನು" (ಮಾರ್ಕ 14:17). ಅಂದರೆ ಮೇಜಿನ ಬಳಿ ಯೇಸುವಿನೊಂದಿಗೆ ಒರಗಿಕೊಂಡ ಅಪೊಸ್ತಲರು (ಲೂಕ 22:14; ಮತ್ತಾಯ 26:20). ಪಸ್ಕ ಭೋಜನದಲ್ಲಿ ಯೇಸುವಿನೊಂದಿಗೆ ಅಪೊಸ್ತಲರಷ್ಟೇ ಹಾಜರಿದ್ದರೆಂದು ವರದಿಯಾಗಿದೆ.

ಯೋಹಾನ 13-16ರಲ್ಲಿ ದಾಖಲೆಯಾದ ಯೇಸುವಿನ ಉಪದೇಶಗಳಿಗೆ ಯೋಹಾನನು ಸಮಯ ಸಂಗತಿಯನ್ನು ಕೊಟ್ಟನು. ಪಸ್ಕದ ಊಟಮಾಡುವದಕ್ಕಿಂತ ಮೊದಲು ಯೇಸುವು ತಾನು ಹೊರಟು ಹೋಗುವ ಸಮಯವು ಬಂದಿದೆಯೆಂದು ಹೇಳಿದನು (ಯೋಹಾನ 13:1). "ಅವರು ಊಟಕ್ಕೆ ಕೂತುಕೊಂಡಿದ್ದರು ... ಯೇಸು ಊಟವನ್ನು ಬಿಟ್ಟು ಎದ್ದು ..." (ಯೋಹಾನ 13:2-4). ಇತರ ಸುವಾರ್ತೆಗಳಲ್ಲಿ ಕೊಟ್ಟ ಮಾಹಿತಿಯೊಂದಿಗೆ ಇದನ್ನು ಕೂಡಿಸಿ, ಪಸ್ಕದ ಊಟದ ಸಮಯದಲ್ಲಿ ಯೇಸುವಿನೊಂದಿಗಿದ್ದವರು ಹನ್ನೆರಡು ಜನ ಅಪೊಸ್ತಲರು. ಮೇಲ್ಮನೆಯಲ್ಲಿಯ ಚರ್ಚೆ ಮತ್ತು ಅನಂತರದ ಘಟನೆಗಳಲ್ಲಿ ಅವರು ಮಾತ್ರವೇ ಒಳಗೊಂಡಿದ್ದರು, ಯೂದನು ಹೊರಟುಹೋದನಂತರ, ಕೇವಲ ಹನ್ನೊಂದು ಜನರು ಉಳಿದರು (ಯೋಹಾನ 13:30). ಇದಕ್ಕಿಂತ ಹೆಚ್ಚು ಅಪೊಸ್ತಲರನ್ನು ಕೂಡಿಸುವುದು ಹಿನ್ನೆಲೆಗೆ ವಿರುದ್ಧವಾಗಿರುತ್ತದೆ.

**ಒಳಗೊಂಡಿರುವ ಜನರು**

ಯೋಹಾನ 13-16ರಲ್ಲಿಯ ಯೇಸುವಿನ ಹೇಳಿಕೆಗಳು ಅಪೊಸ್ತಲರಿಗೆ ಹೇಳಿರುವಾಗ, ಭಿನ್ನವಾದ ಜನರ ಗುಂಪುಗಳಿಗೆ ಸಂಬಂಧಿಸಿ ಹೇಳಿದ್ದಾನೆ (1) ಯೇಸುವು "ನೀವು" ಎಂದು ಹೇಳಿದಾಗ, ಆತನು ಅಪೊಸ್ತಲರ ಬಗ್ಗೆ ಹೇಳಿದನು ಆದರೆ ಎಲ್ಲಾ ಕ್ರೈಸ್ತರ ಬಗ್ಗೆ ಅಲ್ಲ. ಹೀಗೆ ಅಪೊಸ್ತಲರಿಗೆ ವಾಗ್ದನ ಮಾಡಿದ್ದನ್ನು ಇತರ ಕ್ರೈಸ್ತರು ನಿರೀಕ್ಷಿಸುವಂತೆ ತೀರ್ಮಾನಿಸುವದಕ್ಕೆ ಅದೇ ಲಾಭವನ್ನು ವಾಗ್ದಾನ ಮಾಡುವ ಹೊಸ ಒಡಂಬಡಿಕೆಯ ವಾಕ್ಯಗಳ ಮೇಲೆ ನಾವು ಅವಲಂಬಿಸಬೇಕು. ಅಂಥ ವಾಕ್ಯಗಳು ಕಂಡು ಬರದಿದ್ದರೆ, ವಾಗ್ದಾನಗಳು ಅಪೊಸ್ತಲರನ್ನು ಬಿಟ್ಟು ಬೇರೆ ಯಾರನ್ನೂ ಒಳಗೊಂಡಿರುವದಿಲ್ಲವೆಂದು ನಾವು ಸ್ವೀಕರಿಸತಕ್ಕದ್ದು. (2) "ಅವನು," "ಅವನನ್ನು," "ಒಬ್ಬ ಮನುಷ್ಯ," ಇಲ್ಲವೇ "ಅವರು," ಎಂದು ಯೇಸು ಹೇಳಿದಾಗ, ಅಪೊಸ್ತಲರೊಂದಿಗೆ ಸಾಮಾನ್ಯವಾಗಿ ವಿಶ್ವಾಸಿಗಳು ಒಳಗೊಂಡಿದ್ದಾರೆ ಇಲ್ಲವೇ ಬೇರೆಯವರು (ಅಪೊಸ್ತಲರಲ್ಲ) ಸೂಚಿಸಲ್ಪಟ್ಟಿದ್ದಾರೆ.

"ಪ್ರಿಯ ಮಕ್ಕಳೇ, ಇನ್ನು ಸ್ವಲ್ಪ ಕಾಲವೇ ನಿಮ್ಮ ಸಂಗಡ ಇರುತ್ತೇನೆ. ನೀವು ನನ್ನನ್ನು ಹುಡುಕುವಿರಿ ..." (ಯೋಹಾನ 13:33). ಈ ಹಿನ್ನೆಲೆಯಲ್ಲಿ "ನೀವು" ಎಂದು ಯೇಸು ಹೇಳಿದಾಗ ಕೇವಲ ಅಪೊಸ್ತಲರು ಎಂದರ್ಥವಿದೆ. ಹೀಗಿದ್ದರೂ "ನಿಮಗೆ" (ಅಪೊಸ್ತಲರಿಗೆ) ಉದ್ದೇಶಿಸಿದ ಮುಂದಿನ ಹೇಳಿಕೆಯು ಹಿಂದೆ ಯೆಹೂದ್ಯರಿಗೆ ಹೇಳಲ್ಪಟ್ಟಿತ್ತು: "... ನಾನು ಯೆಹೂದ್ಯರಿಗೆ ಹೇಳಿದಂತೆ ಈಗ ನಿಮಗೂ ಹೇಳುತ್ತೇನೆ ..." (ಯೋಹಾನ 13:33). ಯೇಸುವು ಇಲ್ಲಿ ಕೇವಲ ಅಪೊಸ್ತಲರಿಗೆ ಮಾತಾಡುತ್ತಿರುವಾಗ, ಆತನು ಇನ್ನೊಂದು ಸಂದರ್ಭದಲ್ಲಿ ಅಪೊಸ್ತಲರಲ್ಲದೆ ಬೇರೆ ಇತರ ಜನರು ಅದೇ ಪರಿಸ್ಥಿತಿಯನ್ನು ಎದುರಿಸುವರು ಎಂದು ಸೂಚಿಸಿದನು.

"ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು" (ಯೋಹಾನ 13:34ಎ). ಈ ಆಜ್ಞೆಯು ಅಪೊಸ್ತಲರಿಗೆ ಕೊಡಲ್ಪಟ್ಟಿತು, ಆದರೆ ಹೊಸ ಒಡಂಬಡಿಕೆಯು ಯೇಸುವಿನ ಎಲ್ಲಾ ಹಿಂಬಾಲಕರ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂದು ಹೇಳುತ್ತದೆ (1 ಯೋಹಾನ 3:23).

"ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು" (ಯೋಹಾನ 14:21ಎ). ಅರ್ಹತೆಯೊಂದಿಗೆ, "ಅವನು" ಎಂಬ ಪದ ಉಪಯೋಗಿಸುವದರಿಂದ, ಯೇಸು ಕೇವಲ ಅಪೊಸ್ತಲರನ್ನು ಕೂಡಿಸಲಿಲ್ಲ, ಆದರೆ ಆತನ ಆಜ್ಞೆಗಳನ್ನು ಕೈಕೊಳ್ಳುವ ಪ್ರತಿಯೊಬ್ಬನನ್ನೂ ಕೂಡಿಸಿರುತ್ತಾನೆ.

"ಅವರು ನನ್ನನ್ನು ಹಿಂಸೆಪಡಿಸಿದರೆ, ನಿಮ್ಮನ್ನು ಸಹ ಹಿಂಸೆಪಡಿಸುವರು" (ಯೋಹಾನ 15:20ಬಿ). ಈ ವಾಕ್ಯದಲ್ಲಿಯ "ಅವರು" ಪದವು ಅಪೊಸ್ತಲರಲ್ಲದೆ ಇತರರನ್ನು ಎಂದು ಅರ್ಥಕೊಡುತ್ತದೆ ಹಾಗೂ "ನಿಮ್ಮನ್ನು" ಎಂಬುದು ಅಪೊಸ್ತಲರನ್ನು ಮಾತ್ರ ಅನ್ವಯಿಸುತ್ತದೆ.

ಕೆಳಗಿನ ಹೇಳಿಕೆಗಳು ಅಪೊಸ್ತಲರಿಗೆ ಮಾತ್ರ ಹೇಳಲ್ಪಟ್ಟಿವೆ:

> "ಆ ಕಾಲ ಬಂದಾಗ ಆತನು ನಮಗೆ ಇಂಥಿಂಥದನ್ನು ಹೇಳಿದನಲ್ಲಾ ಎಂದು ನೀವು ನೆನಪಿಗೆ ತರುವಂತೆ ನಿಮ್ಮ ಸಂಗಡ ಈ ಮಾತುಗಳನ್ನು ಆಡಿದ್ದೇನೆ. ನಾನು ನಿಮ್ಮ ಸಂಗಡ ಇದ್ದದರಿಂದ ಮೊದಲು ಇವುಗಳನ್ನು ನಿಮಗೆ ಹೇಳಲಿಲ್ಲ" (ಯೋಹಾನ 16:4-5).

> "ಸ್ವಲ್ಪ ಕಾಲವಾದ ಮೇಲೆ ನಾನು ನಿಮಗೆ ಕಾಣುವದಿಲ್ಲ" (ಯೋಹಾನ

16:16ಎ).

"ಈ ಸಂಗತಿಗಳನ್ನು ಗೂಢಾರ್ಥವಾಗಿ ನಿಮಗೆ ಹೇಳಿದ್ದೇನೆ; ಆದರೆ ಇನ್ನು ಮೇಲೆ ಸಾಮ್ಯರೂಪವಾಗಿ ನಿಮ್ಮ ಸಂಗಡ ಮಾತಾಡದೆ ..." (ಯೋಹಾನ 16:25).

"ನೋಡಿರಿ, ನಿಮ್ಮಲ್ಲಿ ಒಬ್ಬೊಬ್ಬನು ತನ್ನ ತನ್ನ ಸ್ಥಳಕ್ಕೆ ಚದರಿಹೋಗಿ ನನ್ನನ್ನು ಒಂಟಿಗನಾಗಿ ಬಿಡುವ ಕಾಲ ಬರುವದು" (ಯೋಹಾನ 16:32ಎ).

ಈ ಸಂದರ್ಭಗಳಲ್ಲಿ "ನೀವು" ಎಂಬುದನ್ನು ಯೇಸುವು ಉಪಯೋಗಿಸಿದಾಗ, ಆತನು ವಿಶೇಷವಾಗಿ ಅಪೊಸ್ತಲರಿಗೆ ಅನ್ವಯಿಸಿದ್ದನು. ಇತರರು ಅದೇ ಲಾಭಗಳನ್ನು ನಿರೀಕ್ಷಿಸಬಹುದೆಂದು ಬೇರೆ ಯಾವುದೇ ಪರಿಶುದ್ಧಬರಹವು ಸೂಚಿಸದಿದ್ದರೆ, ಆಗ ಹೇಳಿಕೆಗಳು ಬೇರೆ ಯಾರಿಗೂ ಅಲ್ಲ ಆದರೆ ಅಪೊಸ್ತಲರಿಗೆ ಅನ್ವಯಿಸುವವು. ಇದು ಅರ್ಥ ಮಾಡಿಕೊಳ್ಳಲು ಮಹತ್ವದ್ದಾಗಿದೆ, ಯಾಕಂದರೆ ಯೋಹಾನನ ಈ ಭಾಗದಲ್ಲಿಯ ಪರಿಶುದ್ಧಾತ್ಮನ ಕಾರ್ಯವನ್ನು ಕುರಿತಾದ ವಾಗ್ದಾನಗಳು ಅಪೊಸ್ತಲರಿಗಾಗಿ ಮಾತ್ರವೇ ಇರುತ್ತವೆ.

## ವಾಗ್ದಾನ ಮಾಡಲ್ಪಟ್ಟ ಆತ್ಮ

ಪರಿಶುದ್ಧಾತ್ಮನ ಬರೋಣವನ್ನು ಕುರಿತು ಯೇಸುವಿನ ವಾಗ್ದಾನವು (ಯೋಹಾನ 14:16-26; 15:26, 27; 16:7-15) ಅಪೊಸ್ತಲರಿಗೆ ಮಾತ್ರವೇ ಮಾಡಲ್ಪಟ್ಟಿತು. ಈ ವಾಕ್ಯಗಳ ಸನ್ನಿವೇಶಗಳಿಂದ ಇದು ಸ್ಪಷ್ಟವಾಗುತ್ತದೆ: "ಈ ಮಾತುಗಳನ್ನು ನಾನು ಇನ್ನೂ ನಿಮ್ಮ ಬಳಿಯಲ್ಲಿರುವಾಗ ನಿಮಗೆ ಹೇಳಿದ್ದೇನೆ" (ಯೋಹಾನ 14:25); "ನೀವು ಮೊದಲಿನಿಂದ ನನ್ನ ಸಂಗಡ ಇದ್ದ ಕಾರಣ ನೀವೂ ಸಾಕ್ಷಿಗಳಾಗಿದ್ದೀರಿ" (ಯೋಹಾನ 15:27); "ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ" (ಯೋಹಾನ 16:12). ಈ ಹೇಳಿಕೆಗಳು ಯೇಸುವು ವಾಸಿಸುತ್ತಿದ್ದವರೊಂದಿಗೆ, ಸಾಕ್ಷಿ ಹೇಳುವವರಿಗೆ, ಆತನ ಸೇವೆಯ ಪ್ರಾರಂಭದಿಂದ ಆತನೊಂದಿಗೆ ಇದ್ದವರಿಗೆ, ಮತ್ತು ಆ ಸಮಯದಲ್ಲಿ ಆತನ ಪೂರ್ಣ ಬೋಧನೆಯನ್ನು ಹೊತ್ತುಕೊಳ್ಳಲಾರದವರಿಗೆ ಹೇಳಲ್ಪಟ್ಟಿವೆ. ಈ ಉಲ್ಲೇಖಗಳು ಅಪೊಸ್ತಲರನ್ನು ಗುರುತಿಸುತ್ತವೆ.

ಪರಿಶುದ್ಧಾತ್ಮನು ಬಂದಾಗ ಆತನು ಏನು ಮಾಡುವನು ಎಂದು ಯೇಸು ವಾಗ್ದಾನ ಮಾಡಿದನೋ ಅದು ಸಹ ಕೇವಲ ಅಪೊಸ್ತಲರನ್ನು ಸೂಚಿಸುತ್ತದೆ. ಆತನು (1) ಅವರಿಗೆ ಎಲ್ಲಾ ಸಂಗತಿಗಳನ್ನು ಬೋಧಿಸುವನು, (2) ಯೇಸುವು ಅವರಿಗೆ ಹೇಳಿದ ಎಲ್ಲವನ್ನೂ ಅವರ ಜ್ಞಾಪಕಕ್ಕೆ ತರುವನು, (3) ಎಲ್ಲಾ ಸತ್ಯದಲ್ಲಿ ಅವರನ್ನು ನಡಿಸುವನು, ಮತ್ತು (4) ಬರಲಿಕ್ಕಿದ್ದ ಸಂಗತಿಗಳನ್ನು ತೋರಿಸುವನು (ಯೋಹಾನ 14:26; 16:13).

ಇಂದು ಜನರಿಗಾಗಿ ಪರಿಶುದ್ಧಾತ್ಮನು ಅದನ್ನೇ ಮಾಡಿದರೆ ಏನು ಸಂಭವಿಸುವುದು? (1) ಅವರಿಗೆ ಬೈಬಲಿನ ಅವಶ್ಯಕತೆಯಿರುವದಿಲ್ಲ. ಪರಿಶುದ್ಧಾತ್ಮನು ಅವರಿಗೆ ಅಗತ್ಯವಾದ ಎಲ್ಲಾ ಆತ್ಮಿಕ ಜ್ಞಾನವನ್ನು ಕೊಡುವನು. (2) ಯೇಸುವಿನ ಬೋಧನೆಯನ್ನು ಅವರು ಓದುವ ಅವಶ್ಯಕತೆಯಿರುವದಿಲ್ಲ. ಯೇಸುವು ಹೇಳಿದ ಪ್ರತಿಯೊಂದನ್ನೂ ಪರಿಶುದ್ಧಾತ್ಮನು ಅವರ ಜ್ಞಾಪಕಕ್ಕೆ ತರುವನು. (3) ಅಭ್ಯಾಸ ಮಾಡಲಿಕ್ಕೆ ಅವರಿಗೆ ಮೂಲ ಕಾರಣವಿರುವದಿಲ್ಲ. ಪರಿಶುದ್ಧಾತ್ಮನು ಎಲ್ಲಾ ಸತ್ಯದಲ್ಲಿ ಅವರನ್ನು ನಡಿಸುವನು. (4) ಏನನ್ನು ಹೇಳಬೇಕು ಇಲ್ಲವೇ ಬೋಧಿಸಬೇಕು ಎಂಬುದನ್ನು ಮೊದಲೇ ಸಿದ್ಧಪಡಿಸಿ

ಕೊಳ್ಳುವ ಇಲ್ಲವೇ ಯೋಚಿಸುವ ಅಗತ್ಯತೆ ಇರುವದಿಲ್ಲ. ಪರಿಶುದ್ಧಾತ್ಮನು ಅವರಿಗೆ ಸರಿಯಾದ ಮಾತುಗಳನ್ನು ಕೊಡುವನು (ಮತ್ತಾಯ 10:19, 20). (5) ಪರಿಶುದ್ಧಾತ್ಮನಿಂದ ಪ್ರೇರೇಪಿಸಲ್ಪಟ್ಟ (ಗಲಾತ್ಯ 1:11, 12) ಪೌಲನಂತೆ ಅವರಿಗೆ ಬೋಧ ನೆಗಳು ಬೇಕಾಗಿರುವದಿಲ್ಲ, ಆದರೆ ಅವರು ತಮ್ಮ ಬೋಧನೆಯನ್ನು ಆತ್ಮನ ಮುಖಾಂತರ ಯೇಸುವಿನಿಂದ ನೇರವಾಗಿ ಹೊಂದಿಕೊಳ್ಳುವರು (ಎಫೆಸ 3:3-5). (6) ಬೈಬಲಿನ ದೈವ ಪ್ರೇರಿತ ಬರಹಗಾರರ ಬೋಧನೆಗೆ ಅವರ ಬೋಧನೆಯು ಸಮನಾಗಿರುವುದು. ಬೈಬಲನಿನ ಬರಹಗಾರರನ್ನು ನಡಿಸಿದ ಆತ್ಮನೆ ಅವರನ್ನೂ ಸಹ ನಡಿಸುವನು. (7) ತಪ್ಪುಗಳನ್ನು ಮಾಡದೇ ಅವರು ಮಾತನಾಡಲು ಮತ್ತು ಬರೆಯಲು ಶಕ್ತರಾಗುವರು. ಬೈಬಲನ್ನು ಬರೆದವರು ದೇವರ ಸಂದೇಶವನ್ನು ತಪ್ಪಿಲ್ಲದೇ ಬರೆಯಲು ಪರಿಶುದ್ಧಾತ್ಮನಿಂದ ಮಾರ್ಗದರ್ಶನ ಹೊಂದಿದರು. ಈ ಸಂಗತಿಯ ಮೇಲೆ ಅವಲಂಭಿಸಿ ಬೈಬಲು ಪೂರ್ಣವಾಗಿದೆ ಹಾಗೂ ತಪ್ಪಿಲ್ಲದ್ದಾಗಿದೆ ಎಂಬ ವಿಶ್ವಾಸ ನಮಗಿರಬಹುದು. (8) ಅವರು ಭವಿಷ್ಯದೊಳಗೆ ನೋಡಿ ಏನು ಬರಲಿಕ್ಕಿದೆ ಎಂಬುದನ್ನು ತಿಳಿಯಲು ಶಕ್ತರಾಗುವರು. ಇಂದು ಆತ್ಮಿಕತೆಯುಳ್ಳ ವರು, ಆಧ್ಯಾತ್ಮಿಕರು, ಅದೃಷ್ಟ ಹೇಳುವವರು ಎಂಬಂತೆ ಕರೆಯಲ್ಪಡುವವರಿಗಿಂತ ಎಷ್ಟೋ ಹೆಚ್ಚಾಗಿ ಮುಂತಿಳಿಸಲು ಶಕ್ತರಾಗುವರು.

ಪ್ರವಾದಿಗಳು ಅಪೊಸ್ತಲರೊಂದಿಗೆ ಪ್ರಕಟನೆಯನ್ನು ಸ್ವೀಕರಿಸಿದರೆಂದು ಪರಿಶುದ್ಧ ಬರಹಗಳು ಬೋಧಿಸುತ್ತವೆ (ಎಫೆಸ 3:3-5). ಅಪೊಸ್ತಲರ ಹಸ್ತಗಳು ಇಡಲ್ಪಡುವದರ ಮುಖಾಂತರ ಅವರು ಪರಿಶುದ್ಧಾತ್ಮನಿಂದ ತುಂಬಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 6:6). ಹೀಗೆ, ವಾಕ್ಯವು ಲಿಖಿತ ರೂಪದಲ್ಲಿ ಲಭ್ಯವಿರುವ ಮೊದಲು ಪರಿಶುದ್ಧಾತ್ಮನ ಸಹಾಯದ ಮೂಲಕ ಬಾಯ್ದೆರೆಯಾಗಿ ಕೊಡಲ್ಪಟ್ಟಿತ್ತು.

ಅಪೊಸ್ತಲರ ಮತ್ತು ಪ್ರವಾದನೆಯ ವರಗಳನ್ನು ಹೊಂದಿದ ಹೊಸ ಒಡಂಬಡಿಕೆಯ ಕ್ರೈಸ್ತರ ಮಧ್ಯದಲ್ಲಿಯ ಭಿನ್ನತೆಯು ಅಪೊಸ್ತಲರಿಗೆ ಎಲ್ಲಾ ಸಂಗತಿಗಳು ಕಲಿಸಲ್ಪಟ್ಟವು, ಯೇಸುವು ಹೇಳಿದ ಎಲ್ಲವೂ ಜ್ಞಾಪಕಕ್ಕೆ ತರಲ್ಪಟ್ಟವು ಮತ್ತು ಎಲ್ಲಾ ಸತ್ಯದೊಳಗೆ ನಡಿಸಲ್ಪಟ್ಟರು ಆದರೆ ಇತರರು ಭಾಗಶಃ ಪ್ರಕಟನೆ ಹೊಂದಿದರು. ಯಾಕಂದರೆ ಅವರು ತಿಳಿಯ ಬೇಕಾಗಿದ್ದ ಪ್ರತಿಯೊಂದನ್ನೂ ಪರಿಶುದ್ಧಾತ್ಮನು ಪ್ರಕಟಿಸಿದ್ದರಿಂದ ಸತ್ಯಕ್ಕಾಗಿ ಅಪೊಸ್ತಲರು ಬೇರೆಯಾರ ಮೇಲೆಯೂ ಅವಲಂಭಿಸಬೇಕಾಗಿರಲಿಲ್ಲ. ಇತರ ಕ್ರೈಸ್ತರು ಕೆಲವು ಸತ್ಯಗಳು ಪ್ರಕಟಿಸಲ್ಪಟ್ಟವರೂ ಸಹ (ಯೋಹಾನ 14:26) ಸಂಪೂರ್ಣ ಪ್ರಕಟನೆಗಾಗಿ ಅಪೊಸ್ತಲರ ಮೇಲೆ ಅವಲಂಭಿಸಬೇಕಾಗಿತ್ತು (2 ತಿಮೊಥೆ 2:2).

**ಸಹಾಯಕ**

ಯೇಸುವು ಪರಿಶುದ್ಧಾತ್ಮನ ಬಗ್ಗೆ ಸಹಾಯಕನಂತೆ (ಗ್ರೀಕ: *parakletos*) ಮಾತಾಡಿದನು.

> ಸಾಮಾನ್ಯವಾಗಿ ಉಪಯೋಗಿಸಿದಂತೆ, [ಹೊಸ ಒಡಂಬಡಿಕೆಯ] ಪದದ ಸಾಹಿತ್ತಿಕ ಭಾಷೆಯನ್ನು ಒಳಗೊಂಡಿರುವಲ್ಲಿ [ಗ್ರೀಕ ಸಾಹಿತ್ಯ] ಅದಕ್ಕೆ ಕಾನೂನು ಅರ್ಥವಿದೆ ಮತ್ತು ಇನ್ನೊಬ್ಬನ ಎದುರಿನಲ್ಲಿ ಯಾರಿಗಾಗಿಯಾದರೂ ಮಾತಾಡುವದನ್ನು ಸೂಚಿಸುತ್ತದೆ.[2]

> ಪರಿಶುದ್ಧಾತ್ಮನಿಗೆ ಅನ್ವಯಿಸಿದಂತೆ, ಗ್ರೀಕ ಪದವು ಯಾವುದೇ ಇಂಗ್ಲೀಷ್ ಪದದಿಂದ ಯೋಗ್ಯ ಭಾಷಾಂತರ ಮಾಡುವುದಕ್ಕೆ ಅಸಾಧ್ಯವಾದಷ್ಟು ಉತ್ಕೃಷ್ಟ

ವಾದದ್ದಾಗಿದೆ. KJVಯ "ಆದರಿಕನು" ಎಂಬುದು ಬೇರೆಯದರಂತೆ ತೃಪ್ತಿಕರವಾದದ್ದಾಗಿದೆ. ಅದು ಕೇವಲ ಆದರಿಸುವವನಂತಷ್ಟೇ ಅಲ್ಲ ಆದರೆ ಬಲಪಡಿಸುವಾತನು, ಸಹಾಯ ಮಾಡುವಾತನು ಮತ್ತು ಆಲೋಚನೆ ಕೊಡುವಾತನು ಎಂಬರ್ಥದಲ್ಲಿ ಪೂರ್ಣವಾಗಿ ತೆಗೆದು ಕೊಂಡರೆ, ನ್ಯಾಯವಾದಿಗೆ ಅವನ ಪಕ್ಷಗಾರನೊಂದಿಗೆ ಇರುವ ಸಂಬಂಧದಂತೆ ತೆಗೆದು ಕೊಂಡರೆ ಹಾಗಾಗೂತ್ತದೆ.[3]

ಯೇಸುವು ಅಪೊಸ್ತಲರೊಂದಿಗೆ ಇರುವವರೆಗೆ, ಆತನು ಅವರ ಉಪದೇಶಕನೂ ಸಹಾಯಕನೂ ಆದರಿಕನೂ ಆಗಿದ್ದನು. ಯೇಸುವು ಬಿಟ್ಟುಹೋದ ನಂತರ ಪರಿಶುದ್ಧಾತ್ಮನು ಆತನ ಸ್ಥಾನದಲ್ಲಿ ನಿಂತುಕೊಳ್ಳಲು ಬಂದನು. "ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ... ಕೊಡುವನು" (ಯೋಹಾನ 14:16); "ನಾನು ನಿಮ್ಮನ್ನು ಅನಾಥರಾಗಿ ಬಿಡುವದಿಲ್ಲ; ನಿಮ್ಮ ಬಳಿಗೆ ಬರುತ್ತೇನೆ" (ಯೋಹಾನ 14:18) ಎಂದು ಯೇಸು ಅಪೊಸ್ತಲರಿಗೆ ವಾಗ್ದಾನ ಮಾಡಿದನು. ಯೇಸುವು ತಾನೇ ಅವರ ಬಳಿಗೆ ಹಿಂದಿರುಗಿ ಬರುವೆನು ಎಂಬರ್ಥದಲ್ಲಿ ಹೇಳಲಿಲ್ಲ; ಪರಿಶುದ್ಧಾತ್ಮನ ಮುಖಾಂತರ ಅವರ ಬಳಿಗೆ ಹಿಂದಿರುಗಿ ಬರುವೆನೆಂಬ ಅರ್ಥದಲ್ಲಿ ಹೇಳಿದನು. ಯೇಸು ಅನಂತರದಲ್ಲಿ ಹೀಗೆ ಹೇಳಿದನು: "ಆದರೂ ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ; ಕೇಳಿರಿ; ನಾನು ಹೋಗುವದು ನಿಮಗೆ ಹಿತಕರವಾಗಿದೆ; ಹೇಗಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವದಿಲ್ಲ; ನಾನು ಹೋದರೆ ಆತನನ್ನು ನಿಮ್ಮ ಬಳಿಗೆ ಕಳುಹಿಸಿಕೊಡುತ್ತೇನೆ" (ಯೋಹಾನ 16:7). ಯೇಸುವು, ಪರಿಶುದ್ಧಾತ್ಮನು, ಸಹಾಯಕನು, ಅವರ ಬಳಿಗೆ ಬಂದಾತನು ಆಗಿರಲಾರನು; ಆತನು ಇನ್ನೊಬ್ಬ ಸಹಾಯಕನನ್ನು (ಯೋಹಾನ 14:16), ಪರಿಶುದ್ಧಾತ್ಮನನ್ನು, ಅವರೊಂದಿಗೆ ಇರಲು ಕಳುಹಿಸುವನು.

**ಸಮಯ**

ತನ್ನ ಪುನರುತ್ಥಾನದ ಸಾಯಂಕಾಲದಲ್ಲಿ ಅಪೊಸ್ತಲರ ಮೇಲೆ ಯೇಸುವು ಊಸುರಿದ ಮೇಲೆ ಆತನು ಹೇಳಿದ್ದು (ಯೋಹಾನ 20:19) ಅಪೊಸ್ತಲರಿಗೆ ಆತ್ಮನು ಯಾವಾಗ ಬಂದನು ಎಂದು ಆಶ್ಚರ್ಯಪಡಲಿಕ್ಕೆ ಕಾರಣವಾಗಿದೆ. ಆ ಸಮಯದಲ್ಲಿ ಯೇಸುವು "ಪರಿಶುದ್ಧಾತ್ಮನನ್ನು ಸ್ವೀಕರಿಸಿರಿ" ಎಂದು ಹೇಳಿದನು (ಯೋಹಾನ 20:22ಬಿ).

ಸ್ವಲ್ಪ ಸಮಯದ ಮೊದಲು, ಕರ್ತನ ಭೋಜನವನ್ನು ಸ್ಥಾಪಿಸಿದಾಗ ಯೇಸುವಿನಿಂದ ಹೇಳಲ್ಪಟ್ಟ ಮಾತುಗಳನ್ನು ನಾವು ಅರ್ಥಮಾಡಿಕೊಂಡಂತೆ, ಇದನ್ನು ಅದೇ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕು, "ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ" (ಮತ್ತಾಯ 26:28) ಎಂದು ಆತನು ಹೇಳಿದನು. ಯೇಸುವು ತನ್ನ ರಕ್ತವು ಸುರಿಸಲ್ಪಡುವದಕ್ಕಿಂತ ಮೊದಲೇ "ಸುರಿಸಲ್ಪಟ್ಟಿತು" ಎಂದು ಹೇಳಿದನು. ಭವಿಷ್ಯದ ಸಂಗತಿಗಳು ಆಗಲೇ ಸಂಭವಿಸಿವೆ ಎಂಬಂತೆ ಆತನು ಮಾತಾಡುವಂತೆ ಆತನು ಭವಿಷ್ಯವನ್ನು ನೋಡಿದನು. ಪರಿಶುದ್ಧಾತ್ಮನನ್ನು ಕೊಡುವದನ್ನು ಕುರಿತು ಅದೇ ಸತ್ಯವಾಗಿರಬಹುದು.

ಯೋಹಾನನ ಪ್ರಕಾರವಾಗಿ, ಪರಿಶುದ್ಧಾತ್ಮನು ಯೇಸುವು ಮಹಿಮೆಪಡಿಸಲ್ಪಟ್ಟ ನಂತರ ಕೊಡಲ್ಪಡುವನು (ಯೋಹಾನ 7:39). ಯೇಸುವು ತಮ್ಮ ಮರಣದ ಮುಖಾಂತರ ಮಹಿಮೆ ಪಡಿಸಲ್ಪಡುವೆನೆಂದೂ (ಯೋಹಾನ 12:23, 24) ಮತ್ತು ತನ್ನ

ಮರಣ, ಪುನರುತ್ಥಾನದ ನಂತರ ತನ್ನ ಮಹಿಮೆಯೊಳಗೆ ಸೇರುವೆನೆಂದೂ ಹೇಳಿದನು (ಲೂಕ 24:26; ನೋಡಿರಿ ಫಿಲಿಪ್ಪಿ 2:8-11; 1 ತಿಮೊಥೆ 3:16).

ಯೇಸುವು ಪರಲೋಕಕ್ಕೆ ಹಿಂದಿರುಗುವ ಮೊದಲು, ತನ್ನ ಶಿಷ್ಯರಿಗೆ ಯೆರೂಸಲೇಮನ್ನು ಬಿಟ್ಟು ಹೋಗಬಾರದೆಂದು ಹೇಳಿದನು "ಸ್ವಲ್ಪ ದಿನಗಳೊಳಗಾಗಿ ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಹೊಂದಲು ಅವರು ಕಾದುಕೊಂಡಿರ ಬೇಕಾಗಿತ್ತು" (ಅಪೊಸ್ತಲರ ಕೃತ್ಯಗಳು 1:4, 5; ನೋಡಿರಿ ಲೂಕ 24:49). ಹತ್ತು ದಿನಗಳನಂತರ, ಯೆಹೂದ್ಯರ ಪಂಚಾಶತ್ತಮ ಹಬ್ಬದಲ್ಲಿ ಬಲದೊಂದಿಗೆ ಪರಿಶುದ್ಧಾತ್ಮನು ಬಂದನು (ಅಪೊಸ್ತಲರ ಕೃತ್ಯಗಳು 2:1-4). ಅವರ ಮೇಲೆ ಯೇಸುವು ಊದಿದಾಗ ಅವರು ಪರಿಶುದ್ಧಾತ್ಮನನ್ನು ಸ್ವೀಕರಿಸಿದ್ದಿಲ್ಲ.

## ಮುಕ್ತಾಯ

ತನ್ನ ಸ್ಥಳದಲ್ಲಿ ಇನ್ನೊಬ್ಬ ಸಹಾಯಕನು ಅವರೊಂದಿಗೆ ಇರುವನು ಎಂದು ಪರಿಶುದ್ಧಾತ್ಮನ ವಾಗ್ದಾನವನ್ನು ಕೊಡುವದರಿಂದ ತನ್ನ ಹೊರಟು ಹೋಗುವಿಕೆ ಯೇಸು ಸಿದ್ಧಪಡಿಸಿದನು. ಯೇಸುವು ಬಿಟ್ಟು ಹೋದನಂತರ ಅವರು ಅನಾಥರಂತೆ ಬಿಟ್ಟು ಬಿಡಲ್ಪಡುವದಿಲ್ಲ, ಆದರೆ ಆತ್ಮನು ಕೊಡಲ್ಪಡುವನು. ಆತ್ಮನ ಮುಖಾಂತರ ಯೇಸುವು ಅವರೊಂದಿಗಿರುವದನ್ನು ಮುಂದುವರಿಸುವನು. ಈ ರೀತಿಯಲ್ಲಿ, ಅವರಿಗೆ ಆತ್ಮಿಕ ಬಲವನ್ನು ಕೊಡುವನು ಮತ್ತು ಎಲ್ಲಾ ಸೃಷ್ಟಿಗೆ ಸುವಾರ್ತೆಯನ್ನು ಸಾರಲು ಅವರು ಲೋಕದೊಳಗೆ ಹೋಗಲು ಮಾರ್ಗದರ್ಶನ ಮಾಡುವನು (ಮಾರ್ಕ 16:15).

---

ಟಿಪ್ಪಣಿಗಳು

[1]ಪರಿಶುದ್ಧಾತ್ಮನ ಬಾಪ್ತಿಸ್ಮ ಪರಿಶುದ್ಧಾತ್ಮನ ಅದ್ಭುತಕರವಾದ ವರಗಳು, ಮಾರ್ಪಡುವಿಕೆ, ಮತ್ತು ಪರಿಶುದ್ಧಾತ್ಮನ ಆಂತರ್ಯದಲ್ಲಿ ಇರುವಿಕೆ ಇವುಗಳನ್ನು ಕುರಿತ ಪಾಠಗಳಲ್ಲಿ, ಪರಿಶುದ್ಧಾತ್ಮನನ್ನು ಸ್ವೀಕರಿಸುವ ಮೊದಲು ಪ್ರಾರ್ಥನೆಗಿಂತ ಹೆಚ್ಚಿನದು ಅವಶ್ಯವಾಗಿದೆ ಎಂದು ಸೂಚಿಸುವ ವಾಕ್ಯಭಾಗಗಳನ್ನು ನಾವು ಚರ್ಚಿಸುತ್ತೇವೆ. [2]P. K. Jewett, *"paraclete," The Zondervan Pictorial Encyclopedia of the Bible,* vol. 4, ed. Merrill C. Tenney (Grand Rapids, Mich.: Zondervan, 1975), 597. [3]"Advocate," *The New International Dictionary of the Bible,* eds. J. D. Douglas and Merrill C. Tenney (Grand Rapids, Mich.: Zondervan, 1987), 20.

© 2009 Truth for Today